Date : 02.04.2026

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ ಕೆ.ಎಸ್.ಟಿ. ವಕೀಲರಿಂದ –**

ನಾನು ಈ ಕೇಸಿನಲ್ಲಿ 1 ನೇ ಅರ್ಜಿದಾರನಿದ್ದು, 2 ನೇ ಅರ್ಜಿದಾರನು ನನ್ನ ತಮ್ಮನಿದ್ದು, ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿ ಇರುತ್ತವೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ ಚಳ್ಳಕೆರೆ ತಾಲ್ಲೂಕು ಹಿರೇಹಳ್ಳಿ ಗ್ರಾಮದ ಸರ್ವೆ ನಂ. 151/4 ಆಸ್ತಿಯ ಬಗ್ಗೆ ಇರುವ ಒಂದು ಪಹಣಿಯ ಪ್ರತಿ, ನನ್ನ ತಾಯಿಯಾದ ಶ್ರೀಮತಿ ಗಂಗಮ್ಮ ಇವರು ಮರಣ ಹೊಂದಿದ ಬಗ್ಗೆ ತೋರಿಸಲು ಇರುವ ಮರಣ ಪ್ರಮಾಣ ಪತ್ರ ಹಾಗೂ ಚಳ್ಳಕೆರೆ ತಾಲ್ಲೂಕು ತಹಶೀಲ್ದಾರ್ ರವರು ನೀಡಿದ ಹಿಂಬರಹ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–1 ರಿಂದ 3 ಎಂದು ಗುರುತಿಸಲಾಯಿತು.

ನನ್ನ ತಾಯಿಯಾದ ಶ್ರೀಮತಿ ಗಂಗಮ್ಮ ಇವರು ದಿಃ 25.01.2021 ರಂದು ನನ್ನ ಮತ್ತು ನನ್ನ ಸಹೋದರನ ಹೆಸರಿಗೆ ಬರೆದಿರುವ ನೊಂದಣಿ ಮರಣಶಾಸನ ಪತ್ರ ಹಾಜರುಪಡಿಸಿರುತ್ತೇನೆ.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಅರ್ಜಿಯಲ್ಲಿ ಕೋರಿದಂತೆ ಆದೇಶ ಮಾಡಲು ಕೋರುತ್ತೇನೆ.

**– ಪಾಟೀ ಸವಾಲು – ಎದುರುದಾರರ ಪರ – ಶ್ರೀ ಎ.ವಿ. ವಕೀಲರಿಂದಃ–**

ಎದುರುದಾರರ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ಕಡತ ಪರಿಶೀಲಿಸಲಾಗಿ, ಎದುರುದಾರರು ತಕರಾರು ಸಲ್ಲಿಸದೇ ಇದ್ದು, ಕಾರಣ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ – ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

*ಓದಿ ಹೇಳಿ ಕೇಳಿ ಸರಿ ಇದೆ.*

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.